

ಸ್ತನಗಳೇ ಇಲ್ಲದ ಹೆಣ್ಣು ಮಗಳನ್ನೊಮ್ಮೆ ಕಲ್ಪಿಸಿಕೊಳ್ಳಿ. ದೇಗುಲದ ಶಿಲಾಬಾಲಿಕೆಗೂ ಎದೆಯ ಮೇಲಿನ ಏರಿಳಿತದ ಕೆತ್ತನೆ ಇಲ್ಲದೇ ಇದ್ದರೆ ಅದು ಕೊರತೆ ಎಂದೇ ಅರ್ಥೈಸಲಾಗುತ್ತದೆ. ಸ್ತನ್ಯಪಾನವೇ ಮಗುವಿಗೆ ಅಮೃತ, ಎದೆಹಾಲು ಮಗುವಿಗೆ ಸಂಜೀವಿನಿ ಎಂದು ಹಿರಿಯರ ಅನುಭವವೂ ಹೇಳುತ್ತದೆ, ವೈದ್ಯಕೀಯ ವಿಜ್ಞಾನವೂ ಹೇಳುತ್ತದೆ. ಪ್ರತಿ ಕುಡಿಯೂ ತಾಯಿ ಹೊಟ್ಟೆಯಿಂದ ಭೂಮಿಗೆ ಬಂದ ಕೂಡಲೇ ಮೊದಲು ಪಡೆಯುವ ಆಹಾರವೇ ಅಂಟುಮಿಶ್ರಿತ ಮೊಲೆ ಹಾಲು. ಅತ್ಯಂತ ಪೌಷ್ಟಿಕ, ರೋಗ ನಿರೋಧಕ ಶಕ್ತಿ ಸಮೃದ್ಧವಾಗಿರುವ ಅಮೃತ ತೊಟ್ಟಿಕ್ಕುವುದೇ ತಾಯಿಯ ಸ್ತನಗಳಿಂದ. 'ಸ್ತನ್ಯಪಾನಂ ಅಮೃತಂ' ಎನ್ನುವುದು ಇದೇ ಕಾರಣಕ್ಕೆ.

ಸ್ತನವೆಂದರೆ ಅದು ಹೆಣ್ತನ, ಸ್ತನವಿದ್ದರೇ ತಾಯ್ತನ, ಸ್ತನವೇ ಹೆಣ್ಣಿಗೆ ಭೂಷಣ, ಸ್ತನ ತರುವುದು ಹೆಣ್ಣಿಗೆ ಹೆಣ್ಣೆಂಬ ವಿಶೇಷಣ. ಈ ಸ್ತನ, ಸೌಂದರ್ಯದ ಸಂಕೇತವೂ ಹೌದು. ಇಷ್ಟೆಲ್ಲ ಮಹತ್ವ ಇರುವ ಹೆಣ್ಣಿನ ಸ್ತನಗಳ ಬಗ್ಗೆ, ಇದರ ಆರೋಗ್ಯದ ಬಗ್ಗೆ, ಸ್ತನ ಕ್ಯಾನ್ಸರ್ ಬಗ್ಗೆ, ಇವುಗಳ ಔಚಿತ್ಯದ ಬಗ್ಗೆ ಇತ್ತೀಚೆಗೆ ಜಗತ್ತಿನಾದ್ಯಂತ ಚರ್ಚೆ ನಡೆಯುತ್ತಿದೆ. ಈಚೆಗೆ (ಫೆ. 4) ನಡೆದ 'ವಿಶ್ವ ಸ್ತನ ಕ್ಯಾನ್ಸರ್ ದಿನಾಚರಣೆ'ಯಲ್ಲೂ ವಿಶ್ವದಾದ್ಯಂತ ಕ್ಯಾನ್ಸರ್ ತಜ್ಞರು ಸ್ತನಗಳ ಆರೋಗ್ಯದ ಬಗ್ಗೆ ಚರ್ಚಿಸಿರುವುದು ಆಶಾದಾಯಕ ಬೆಳವಣಿಗೆ.

ಸ್ತನ ಕ್ಯಾನ್ಸರ್ ಮಟ್ಟಿಗೆ ಜಾಗತಿಕ ವಿದ್ಯಮಾನವನ್ನು ಗಮನಿಸಿದರೆ ಈ ಅರ್ಬುದ ರೋಗ ಅತ್ಯಂತ ವೇಗವಾಗಿ ವ್ಯಾಪಿಸುತ್ತಿರುವುದು ವೈದ್ಯಕೀಯ ಸಂಶೋಧನೆಯಿಂದ ದೃಢಪಟ್ಟಿದೆ. ಇದು ವಿಶ್ವ ಆರೋಗ್ಯ ಸಂಸ್ಥೆಗೂ ತಲೆನೋವಾಗಿ ಪರಿಣಮಿಸಿದೆ. ನಮ್ಮ ದೇಶದ ಪರಿಸ್ಥಿತಿಯೂ ಇದಕ್ಕಿಂತ ಹೊರತಾಗಿಲ್ಲ. ವರ್ಷಕ್ಕೆ ಸುಮಾರು ಒಂದೂವರೆ ಲಕ್ಷ ಮಹಿಳೆಯರು ಸ್ತನ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಬೆಂಗಳೂರಿನ ಕಿದ್ವಾಯ್ ಕ್ಯಾನ್ಸರ್ ಆಸ್ಪತ್ರೆ ನಡೆಸಿದ ಅಧ್ಯಯನವೂ ಈ ಮಾತಿಗೆ ಪುಷ್ಟಿ ನೀಡಿದ್ದು, ರಾಜ್ಯದಲ್ಲಿ ಬೇರೆಲ್ಲ ಕ್ಯಾನ್ಸರ್‌ಗಳಿಗಿಂತಲೂ ಸ್ತನ ಕ್ಯಾನ್ಸರ್ ಪ್ರಮಾಣವೇ ಹೆಚ್ಚಾಗಿದೆ.

ಅಮೆರಿಕದ ನಟಿ ಏಂಜಲಿನಾ ಜೋಲಿ 2013ರಲ್ಲಿ ಸ್ತನ ಕ್ಯಾನ್ಸರ್ ಬರುವ ಸಂಭಾವ್ಯತೆಯನ್ನು ಊಹಿಸಿ ತಮ್ಮೆರಡೂ ಸ್ತನಗಳನ್ನು ತೆಗೆಸಿಕೊಂಡಿದ್ದರು. ಅಮೆರಿಕದಲ್ಲಿ ಸ್ತನ ಕ್ಯಾನ್ಸರ್ ಸಂಖ್ಯೆ ವಿಶ್ವದಲ್ಲೇ ಅತ್ಯಧಿಕವಾಗಿತ್ತು. ಅಲ್ಲೀಗ ಗರ್ಭಕೋಶದ ಕ್ಯಾನ್ಸರ್ ಹೆಚ್ಚಿದೆ. ನಮ್ಮ ದೇಶದಲ್ಲಿ ಗರ್ಭಕೋಶ ಕ್ಯಾನ್ಸರ್‌ಗಿಂತಲೂ ಸ್ತನ ಕ್ಯಾನ್ಸರ್ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಸ್ತನ ಕ್ಯಾನ್ಸರ್‌ಗೆ ತುತ್ತಾಗಿ ತಮ್ಮ ಸ್ತನಗಳನ್ನು ಸರ್ಜರಿ ಮೂಲಕ ತೆಗೆಸಿಕೊಂಡು ಅಪಾಯದಿಂದ ಪಾರಾದ ಮಹಿಳೆಯರ ಉದಾಹರಣೆಗಳೂ ಸಾಕಷ್ಟಿವೆ. ವೈದ್ಯೆಯೇ ಆಗಿರಬಹುದು, ಸಂಗೀತಗಾರ್ತಿಯೇ ಆಗಿರಲಿ, ಸಾಮಾಜಿಕ ಕಾರ್ಯಕರ್ತೆ, ಕ್ರೀಡಾಪಟು, ಹೀಗೆ ಸಮಾಜದ ಎಲ್ಲ ಸ್ತರದ ಅನೇಕ ಮಹಿಳೆಯರನ್ನು ಸ್ತನ ಕ್ಯಾನ್ಸರ್ ಬಾಧಿಸುತ್ತಿದೆ. ರೋಗವನ್ನು ಮೆಟ್ಟಿ ನಿಂತು, ಛಲ–ಮನೋಬಲದಿಂದ ಕ್ಯಾನ್ಸರ್ ಗೆದ್ದವರಿದ್ದಾರೆ, ಸ್ತನ ತೆಗೆಸಿಕೊಂಡು ಬಂದರೂ ಸಹಜ ಜೀವನ ನಡೆಸುತ್ತಿರುವ ಅನೇಕರು ನಮ್ಮೊಂದಿಗಿದ್ದಾರೆ. ಅಂಥ ಕೆಲವು ದಿಟ್ಟೆಯರ ಮಾತುಗಳು ಇಲ್ಲಿವೆ. ಈ ಮಾತುಗಳು ಸ್ತನ ಕ್ಯಾನ್ಸರ್ ಭಯದಿಂದ ಕಂಗಾಲಾಗುವ ಮಹಿಳೆಯರಿಗೆ ಸ್ಫೂರ್ತಿಯಾಗಬಲ್ಲವು.

## ಕುಗ್ಗಲಿಲ್ಲ, ಗೆದ್ದು ಬಂದೆ!

ಡಾ. ಗಿರಿಜಾ ನಾಡಗೌಡರ್, ವೃತ್ತಿಯಲ್ಲಿ ಹೋಮಿಯೊಪತಿ ವೈದ್ಯೆಯಾಗಿದ್ದವರು. ಸ್ತನ ಕ್ಯಾನ್ಸರ್ ಇವರ ಕುಟುಂಬಕ್ಕೆ ಆನುವಂಶಿಕ ಬಳುವಳಿಯೇ ಎನ್ನಬಹುದು. ಇವರ ಕುಟುಂಬದಲ್ಲಿ ಅಕ್ಕ, ಚಿಕ್ಕಮ್ಮ, ಚಿಕ್ಕಮ್ಮನ ಮಕ್ಕಳು... ಹೀಗೆ ಏಳು ಹೆಣ್ಣುಮಕ್ಕಳಿಗೆ ಸ್ತನ ಕ್ಯಾನ್ಸರ್ ಬಂದು ಸರ್ಜರಿ ಆಗಿದೆ. ಎಲ್ಲರೂ ಇದನ್ನು ಧೈರ್ಯವಾಗಿ ಎದುರಿಸಿದ್ದಾರೆ. ಉತ್ತಮ ಜೀವನಶೈಲಿ ರೂಢಿಸಿಕೊಂಡು ಆರೋಗ್ಯವಾಗಿದ್ದಾರೆ.

“ನನಗೀಗ 73 ವರ್ಷ. ಸ್ತನ ಕ್ಯಾನ್ಸರ್‌ಗೆ ಒಳಗಾಗಿ ಎರಡೂ ಸ್ತನಗಳನ್ನು ತೆಗೆಸಿಕೊಳ್ಳಬೇಕಾಯಿತು. ಒಂದು ಸ್ತನ ಸರ್ಜರಿ ಆಗಿ 12 ವರ್ಷಗಳ ಬಳಿಕ, ಮತ್ತೊಂದು ಸ್ತನಕ್ಕೂ ಕ್ಯಾನ್ಸರ್ ಬಂದು ಸರ್ಜರಿ ಮಾಡಿಸಿಕೊಳ್ಳಬೇಕಾಯಿತು.

ಕ್ಯಾನ್ಸರ್ ಬಂದಾಗ ಮೊದಲು ಸ್ತನದ ಗಾತ್ರ, ಬಣ್ಣ, ಆಕಾರದಲ್ಲಿ ವ್ಯತ್ಯಾಸವಾಯಿತು. ಮೊಲೆತೊಟ್ಟು ಒಳಮುಖವಾಗಿ ಮಡಿಚಿಕೊಂಡು ಕೀವು, ರಕ್ತ ಸೋರುವುದಕ್ಕೆ ಶುರು ಆಯ್ತು. ಈ ಬದಲಾವಣೆ ಗಮನಿಸಿ ವೈದ್ಯರ ಬಳಿ